(ಪುತ್ತೂರು), ದಾಕ್ಷಾಯಿಣಿ ಭಟ್, ಎನ್. ಮಂಗಳಾ, ಕೆ.ಜಿ. ಕೃಷ್ಣಮೂರ್ತಿ, ಮುಂತಾದವರು ದಶಕಗಳಿಂದ ಮಕ್ಕಳ ರಂಗಭೂಮಿಯಲ್ಲಿ ತೊಡಗಿಕೊಂಡಿದ್ದಾರೆ. ತುಮರಿಯಲ್ಲಿ 'ಕಿನ್ನರಮೇಳ' ಸ್ಥಾಪಿಸಿ ಮಕ್ಕಳ ರಂಗಭೂಮಿಗೆ ಅವಿರತವಾಗಿ ಶ್ರಮಿಸುತ್ತಿರುವ ಕೆ.ಜಿ. ಕೃಷ್ಣಮೂರ್ತಿಯವರಂತೂ ವಿಶೇಷ ಉಲ್ಲೇಖಕ್ಕೆ ಪಾತ್ರರಾಗಿದ್ದಾರೆ. ಮಕ್ಕಳಿಗಾಗಿ ಕಾದಂಬರಿಗಳನ್ನು ರಚಿಸುತ್ತಿರುವ ಹಿರಿಯ ಕಾದಂಬರಿಕಾರರಾದ ನಾ. ಡಿಸೋಜ, ಸುಮತೀಂದ್ರ ನಾಡಿಗ, ರಾಜಶೇಖರ ಭೂಸನೂರುಮಠ, ಶಶಿಧರ ವಿಶ್ವಾಮಿತ್ರ, ಬಸು ಬೇವಿನಗಿಡದ ಮೊದಲಾದವರನ್ನು ಮರೆಯುವಂತಿಲ್ಲ.

★★★

ಬೊಳುವಾರು, ತಮ್ಮ 'ತಟ್ಟು ಚಪ್ಪಾಳೆ ಪುಟ್ಟ ಮಗು' ಎಂಬ ಮಕ್ಕಳ ಕಾವ್ಯದ ಆಂಥಾಲಜಿಯಲ್ಲಿ ಮಕ್ಕಳ ಕಾವ್ಯವನ್ನು ಪರಿಚಯಿಸುವಾಗ ಒಂದು ಮುಖ್ಯವಾದ ಮಾತು ಉಲ್ಲೇಖಿಸುತ್ತಾರೆ. 'ಶಿಶುಗೀತೆಗಳು ಅನಾಥ ಮಗುವಿನ ರೋದನ' ಎಂಬುದು ಆ ಉಲ್ಲೇಖ. ಚಾರಿತ್ರಿಕವಾಗಿ ಆ ಮಾತು ಮುಖ್ಯವಾದುದು. ಔದ್ಯೋಗಿಕ ಕ್ರಾಂತಿಯ ಪರಿಣಾಮವಾಗಿ ಗಂಡನ ಜತೆ ಹೆಂಡತಿಯೂ ದುಡಿಯಲು ಹೋದಾಗ ನಿರ್ಮಾಣಗೊಂಡ ಅನಾಥ ಮಕ್ಕಳ ಸಂಸ್ಥೆಗಳಲ್ಲಿ ಮಕ್ಕಳ ಸಾಹಿತ್ಯ ಎಂಬ ಪ್ರಕಾರವು ಅಂಬೆಗಾಲಿಟ್ಟಿತಂತೆ! ಬೇರೆ ಬೇರೆ ಸಾಹಿತ್ಯ ಪ್ರಕಾರಗಳಂತೆ ಮಕ್ಕಳ ಸಾಹಿತ್ಯವೂ ಇಂಗ್ಲಿಷ್ ಮಂದಿಯೊಂದಿಗೆ ಭಾರತಕ್ಕೆ ವಲಸೆ ಬಂದಿರುವಂಥದ್ದು. ನಮ್ಮ ದೇಶದಲ್ಲಿ ಬೊಳುವಾರರು ಗುರುತಿಸಿರುವಂತೆ ಶಿಶು ಗೀತೆಗಳ ಮೊದಲ ಕೂಗು ಕೇಳಿದ್ದು ಪಾಠಶಾಲೆಗಳಲ್ಲಿ. ಶಿಶುಗೀತೆಗಳ ರಚನೆಯಲ್ಲಿ ವಿಶೇಷವಾಗಿ ತೊಡಗಿದವರು ಕೂಡಾ ಅಧ್ಯಾಪಕರುಗಳು. ಪಠ್ಯಪುಸ್ತಕಗಳೇ ಶಿಶು ಸಾಹಿತ್ಯದ ಮೊದಲ ಆಶ್ರಯ ಸ್ಥಾನಗಳು. ಮೊದಲು ಇಂಗ್ಲಿಷ್ ಪದ್ಯಗಳ ಅನುವಾದಗಳೇ ಹೆಚ್ಚಾಗಿ ಕಾಣಿಸಿ ಕೊಂಡರೂ ಕ್ರಮೇಣ ಸ್ವತಂತ್ರ ರಚನೆಗೂ ನಮ್ಮ ಸಾಹಿತಿಗಳು ತೊಡಗಿಕೊಂಡರು. ಪಂಜೆ ಮಂಗೇಶರಾವ್, ಹೊಯಿಸಳ, ಶಿವರಾಮ ಕಾರಂತ, ಜಿ.ಪಿ. ರಾಜರತ್ನಂ, ಸಿದ್ದಯ್ಯ ಪುರಾಣಿಕ, ಸ್ವತಃ ಕುವೆಂಪು ಅವರಂಥ ಮಹತ್ವದ ಲೇಖಕರು ಮಕ್ಕಳ ಸಾಹಿತ್ಯಕ್ಕೆ ತಮ್ಮ ಅಮೂಲ್ಯ ಕೊಡುಗೆ ನೀಡಿದ್ದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ವರ್ತಮಾನದಲ್ಲಿ ಆ ಪರಂಪರೆಯನ್ನು ಸದೃಢವಾಗಿ ಮುಂದುವರೆಸಬಲ್ಲ ಅನೇಕ ಸಮರ್ಥ ಲೇಖಕರಿದ್ದಾರೆ. ಕನ್ನಡ ಮಕ್ಕಳು ಕನ್ನಡ ಮಕ್ಕಳಾಗಿ ಉಳಿಯಬೇಕಷ್ಟೆ!

### ಎಚ್.ಎಸ್. ವೆಂಕಟೇಶಮೂರ್ತಿ

ಕವಿತೆ, ಕತೆ, ನಾಟಕ, ಪ್ರಬಂಧ, ಕಾದಂಬರಿ, ಮಕ್ಕಳ ಸಾಹಿತ್ಯ, ಅನುವಾದ, ವಿಮರ್ಶೆಯ ಕ್ಷೇತ್ರಗಳಲ್ಲಿ ಕೆಲಸ ಮಾಡಿರುವ ಎಚ್ಚೆಸ್ವಿ ಉತ್ತಮ ಚಿತ್ರಗೀತೆಗಳನ್ನೂ ಬರೆದಿದ್ದಾರೆ. ಅವರು ಗೀತೆಗಳನ್ನು ಬರೆದಿರುವ 'ಚಿನ್ನಾರಿ ಮುತ್ತ', 'ಕೊಟ್ರೇಶಿಯ ಕನಸು' ಸಿನಿಮಾಗಳು ಜನಪ್ರಿಯವಾಗಿವೆ. ಅವರು ಹುಟ್ಟಿದ್ದು ಚನ್ನಗಿರಿ ತಾಲ್ಲೂಕಿನ ಹೋದಿಗೆರೆ ಗ್ರಾಮದಲ್ಲಿ. ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರು.

'ಪರಿವೃತ್ತ', 'ಬಾಗಿಲು ಬಡಿವ ಜನಗಳು', 'ಮೊಖ್ತಾ', 'ಸಿಂದಬಾದನ ಆತ್ಮಕಥೆ', 'ಕ್ರಿಯಾಪರ್ವ', 'ಒಣಗಿದ ಮರದ ಗಿಳಿಗಳು', 'ಋತುವಿಲಾಸ', 'ಎಷ್ಟೊಂದು ಮುಗಿಲು', 'ಅಮೆರಿಕಾದಲ್ಲಿ ಬಿಲ್ಲುಹಬ್ಬ', 'ವಿಮುಕ್ತಿ', 'ಭೂಮಿಯೂ ಒಂದು ಆಕಾಶ', 'ನದೀತೀರದಲ್ಲಿ', 'ಉತ್ತರಾಯಣ ಮತ್ತು...' ಅವರು ಕೆಲವು ಕವನ ಸಂಗ್ರಹಗಳಾಗಿವೆ. ಕನ್ನಡ ಕಾವ್ಯದ ದಿಗಂತಗಳನ್ನು ವಿಸ್ತರಿಸಿದ ಮಹತ್ವದ ಕವಿಗಳಲ್ಲಿ ಎಚ್ಚೆಸ್ವಿ ಒಬ್ಬರು.